**ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ. ಇ.ಎನ್. ವಕೀಲರಿಂದಃ**

3 ನೇ ಪ್ರತಿವಾದಿಯವರನ್ನು ಗುರುಸಿದ್ದಪ್ಪ ರವರು ದತ್ತಕ ಪಡೆದುಕೊಂಡಿರುತ್ತಾರೆ. 1978 ರಲ್ಲಿ ಯುಗಾದಿ ಹಬ್ಬದ ದಿನ ದತ್ತಕ ಪಡೆದುಕೊಂಡಿರುತ್ತಾರೆ. ಆ ದಿನ ದೊಡ್ಡ ಪ್ರಮಾಣದಲ್ಲಿ ಸಮಾರಂಭ ಆಗಿರುತ್ತದೆ. ಸದರಿ ಸಮಾರಂಭಕ್ಕೆ ನಾನು ಹೋಗಿರುತ್ತೇನೆ. ಸದರಿ ಉಳಿವೆಪ್ಪ ರವರನ್ನು ವಾದಿಯ ತಂದೆ ತಾಯಿ ಚನ್ನಬಸಪ್ಪ ಮತ್ತು ಬಸವಣ್ಣಮ್ಮ ರವರು ಗುರುಸಿದ್ದಪ್ಪ ಮತ್ತು ಬಸವಣ್ಣಮ್ಮ ರವರಿಗೆ ದತ್ತಕ ನೀಡಿರುತ್ತಾರೆ. ಸಮಾರಂಭ ಆದಾಗಿನಿಂದ ಉಳಿವೆಪ್ಪ ರವರು ಗುರುಸಿದ್ದಪ್ಪ ಮತ್ತು ಬಸವಣ್ಣಮ್ಮ ರವರ ಮನೆಯಲ್ಲಿ ದತ್ತು ಮಗನಾಗಿ ವಾಸವಾಗಿರುತ್ತಾರೆ ಅಂದರೆ ಸರಿ.

1 ಮತ್ತು 2 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**